

ಕೈಗೆತ್ತಿಕೊಂಡು ಓದತೊಡಗಿದಳು. ಅರವಿಂದನಿಗೆ ಮತ್ತೆ ಊರಿನ ನೆನಪುಗಳು ಮನದೊಳಗೆ ಸುಳಿದಾಡಿದವು.

* * *

ಅಂದು ಮೋಹನನ ಜೊತೆ ಬೈಕಲ್ಲಿ ಕುಳಿತು ಮಂಗಳೂರಿನಿಂದ ಕಿನ್ನಿಗೋಳಿಗೆ ಹೋಗುತ್ತಿದ್ದಾಗ ಮಂಗಳೂರು ಕೂಡಾ ಮುಂಬಯಿಯಂತೆ ಕಟ್ಟಡಗಳ ಕಾಂಕ್ರೀಟ್ ಆಗುತ್ತಿರುವುದು ಸ್ಪಷ್ಟವಾಗಿ ಗೋಚರಿಸುತ್ತಿತ್ತು. ಫ್ಲ್ಯಾಟ್‌ಗಳಲ್ಲಿ ವಾಸ ಮಾಡುವುದೇ ಖುಷಿಯ ಸಂಗತಿ ಎಂಬಂತೆ ಜನರೂ ಬದಲಾಗುತ್ತಿದ್ದಾರೆಂದು ಅನಿಸಿತು. ಇಲ್ಲೀಗ ಬಾಡಿಗೆ ಮನೆಯ ರೇಟೂ ವಿಪರೀತ ಎಂದು ಮೋಹನ ಹೇಳುತ್ತಿದ್ದುದು ಸರಿ ಅನಿಸಿತು.

ಕಿನ್ನಿಗೋಳಿಯಲ್ಲಿ ಅಜ್ಜಿ ಮನೆಗೆ ಹೋಗಲು ಅಮ್ಮನೇ ಹೇಳಿದ್ದರಿಂದ ಮೋಹನನ ಜೊತೆ ತಾಜಾ ಹುರುಪಿಂದ ಹೊರಟಿದ್ದ ಅರವಿಂದ. ಹಚ್ಚ ಹಸುರಿನ ವನಸಿರಿಯ ನಡುವೆ ಧ್ಯಾನಿಸುವ ನಿಶ್ಶಬ್ದತೆಯ ಸೊಬಗಿನ ವಾತಾವರಣವನ್ನು ಆಸ್ವಾದಿಸುವುದೆಂದರೆ ಅರವಿಂದನಿಗೆ ತೀರಾ ಇಷ್ಟದ ಸಂಗತಿಯಾಗಿತ್ತು. ಅಜ್ಜ ಅಜ್ಜಿ ಬದುಕಿದ್ದ ದಿನಗಳಲ್ಲಿ ಚಿಕ್ಕಂದಿನಲ್ಲಿ ಆತ ರಜಾ ದಿನಗಳಲ್ಲಿ ತಪ್ಪದೇ ಬರುತ್ತಿದ್ದ. ಆ ಹಳ್ಳಿಯ ಕೆರೆ ತೊರೆಗಳಲ್ಲೆಲ್ಲಾ ಮನಸೋ ಇಚ್ಛೆ ಈಜುತ್ತಾ, ಚಿಟ್ಟೆ, ಹಕ್ಕಿ, ಹಾವು, ಬಾವಲಿಗಳ ವೀಕ್ಷಿಸುತ್ತಾ, ಮಾವು, ಗೇರು, ಬೇಲಿ ಹಣ್ಣುಗಳನ್ನೆಲ್ಲಾ ಸವಿಯುತ್ತಾ, ಮಾವನ ಮಕ್ಕಳ ಜೊತೆಯಲ್ಲಿ ಲಗೋರಿ, ಕ್ರಿಕೆಟ್ ಆಡುತ್ತಾ ಅವಕಾಶ ಸಿಕ್ಕಿದರೆ ರಾತ್ರಿ ಸೋದರ ಮಾವಂದಿರ ಜೊತೆ ಯಕ್ಷಗಾನ ಬಯಲಾಟ ನೋಡುತ್ತಾ ಒಂಥರಾ ಅಜ್ಜಿ ಮನೆಯ ವಿಶೇಷ ಆಕರ್ಷಣೆಗೊಳಗಾಗಿದ್ದ ಅರವಿಂದ.

ಒಂದೊಮ್ಮೆ ಹನ್ನೆರಡು ಜನರಿದ್ದ ಅಜ್ಜಿ ಮನೆಯಲ್ಲಿ ಈಗ ಬರೀ ಮಾವ ಮತ್ತು ಅತ್ತೆ ಮಾತ್ರ. ಉಳಿದವರೆಲ್ಲಾ ಬೇರೆ ಬೇರೆ ಕಡೆ ಕೆಲಸ ಹಿಡಿದಿದ್ದಾರೆ. ಅಂದು ಅಜ್ಜಿಮನೆಗೆ ಬಂದಾಗಲೆಲ್ಲ ಶ್ರೀಪತಿ ಮಾವ ತೋಟದಲ್ಲಿ ಬೆಳೆದ ತರಕಾರಿಗಳನ್ನು ಒಂದು ಚೀಲದಷ್ಟು ತುಂಬಿಸಿಕೊಡುತ್ತಿದ್ದರು. ಆರು ಜನ ಅಣ್ಣತಮ್ಮಂದಿರು, ಮೂವರು ಅಕ್ಕತಂಗಿಯರ ಅಜ್ಜಿ ಮನೆಯಲ್ಲಿ ಅರವಿಂದನ ತಾಯಿ ಕೊನೆಯವರು. ಹಾಗಾಗಿ ಶ್ರೀಪತಿ ಮಾವನಿಗೆ ಕೊನೆಯ ತಂಗಿಯ ಬಗ್ಗೆ ವಿಪರೀತ ಪ್ರೀತಿ. ಆಗಿನ್ನೂ ಆಸ್ತಿ ಪಾಲು ಆಗಿರಲಿಲ್ಲ. ಆರು ಜನ ಅಣ್ಣತಮ್ಮಂದಿರಲ್ಲಿ ಇಬ್ಬರು ತೀರಿಕೊಂಡಿದ್ದಾರೆ. ವರ್ಷಕ್ಕೊಮ್ಮೆ ಸಮಾರಾಧನೆಗೆ ಎಲ್ಲರೂ ಒಟ್ಟು ಸೇರುತ್ತಾರೆ. ಪ್ರತೀ ವರ್ಷವೂ ಆಸ್ತಿ ಪಾಲು ಮಾಡುವ ಬಗ್ಗೆ ಮೀಟಿಂಗ್ ನಡೆಸುತ್ತಾರೆ. ಕೊನೆಗೆ ಯಾವುದೂ ಇತ್ಯರ್ಥವಾಗದೆ ಮರಳುತ್ತಾರೆ. ನಮಗೆ ಆ ಕಡೆಯ ಹೊಲ ಬೇಕು, ನಮಗೆ ಈ ಕಡೆಯ ತೋಟ ಬೇಕು...ಎಂದೆಲ್ಲಾ ಒಬ್ಬೊಬ್ಬರು ತಮ್ಮ ಪಾಲು ಮುಂದಿಟ್ಟಾಗ.... ಯಾವುದೂ ತೀರ್ಮಾನವಾಗದೆ ಎಲ್ಲರೂ ಬಂದ ದಾರಿಯಲ್ಲಿ ಫಲಿತಾಂಶ ಸಿಗದೆ ತೆರಳುತ್ತಿದ್ದರು.

ಹಾಗೆ ನೋಡಿದರೆ ಶ್ರೀಪತಿ ಮಾವ ಲಾ ಕಾಲೇಜಿನಲ್ಲಿ ಓದುತ್ತಿದ್ದವರು. ಆವಾಗ ಕಾಲೇಜ್‌ಗಳಲ್ಲಿ ವಿದ್ಯಾರ್ಥಿ ಯೂನಿಯನ್‌ಗಳು ಸಕ್ರಿಯವಾಗಿದ್ದ ದಿನಗಳು. ಶ್ರೀಪತಿ ಮಾವ ಅಧ್ಯಾಪಕರ ವಿರುದ್ಧವೇ ಏನೋ ಬಂಡಾಯವೆದ್ದು ಕೊನೆಗೆ ಕಾಲೇಜ್ ತ್ಯಜಿಸಿ 'ನಾನಿನ್ನು ಕೃಷಿಯೇ ಮಾಡುತ್ತೇನೆ' ಎಂದು ವಾಪಾಸು ಮನೆಗೆ ಬಂದವರು. ಇವರು ಕಾಲೇಜ್ ನಿಲ್ಲಿಸಿ ಮನೆಗೆ ಬಂದದ್ದರಿಂದಲೇ ಇತರರು ಬೇರೆ ಕಡೆ ಒಬ್ಬೊಬ್ಬರೇ ಉದ್ಯೋಗ ಹಿಡಿದರು. ಅಜ್ಜ ಅಜ್ಜಿಯ ಜೊತೆ ಶ್ರೀಪತಿ ಮಾವ ಕೃಷಿ ಮಾಡುತ್ತಾ ಅದರಲ್ಲೇ ಬದುಕನ್ನು ಸಾರ್ಥಕ ಪಡಿಸಿಕೊಂಡವರು. ಹಾಗಾಗಿಯೇ ಅರವಿಂದನಿಗೆ